CrMC 231/2018. RW-1.

<u>ಪ್ರಧಾನ ಸಿವಿಲ್ ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ಕಡೂರು.</u>

Crl.Misc. 231/2018. R.W.-1.

ದಿನಾಂಕಃ07.03.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

<u>ಮುಂದುವರೆದ ಮುಖ್ಯ ವಿಚಾರಣೆಃ ಎದುರುದಾರರ ಶ್ರೀ. ಬಿ ಆರ್ ಹೆಚ್ ವಕೀಲರಿಂದಃ-</u>

O.S.50/2017 ರ ಡಿಕ್ರಿಯ ದೃಢೀಕೃತ ನಕಲನ್ನು ನಿ ಆರ್-5 ಎಂದು ಗುರುತಿಸಲಾಯಿತು.

ನನ್ನ ಅಣ್ಣ ಜಯಪ್ರಕಾಶ್ ಹೆಸರಿನಲ್ಲಿರುವ ಸರ್ವೆ ನಂ.10/3, 19/7, 17/2 ರ ಪಹಣಿ ಹಾಗೂ ನನ್ನ ಅಕ್ಕಂದಿರ ಹೆಸರಿನ್ಲಿರುವ ಸರ್ವೆ ನಂ.155/1 ರ ಪಹಣಿ ಪತ್ರಿಕೆ ಹಾಜರುಪಡಿಸಿರುತ್ತೇನೆ, ಅವುಗಳನ್ನು ನಿ ಆರ್-6 ರಿಂದ 9 ಎಂದು ಗುರುತಿಸಲಾಯಿತು.

MR H12/2020-21 ಪ್ರತಿ ಹಾಜರುಪಡಿಸಿರುತ್ತೇನೆ, ಸದರಿ ದಾಖಲೆಯನ್ನು ನಿಆರ್-10 ಎಂದು ಗುರುತಿಸಲಾಯಿತು.

ನನ್ನ ಬಿ.ಪಿ.ಎಲ್.ಕಾರ್ಡಿನ ನಕಲನ್ನು ಮೂಲ ಪ್ರತಿಯೊಂದಿಗೆ ಹಾಜರುಪಡಿಸಿರುತ್ತೇನೆ, ಸದರಿ ದಾಖಲೆಯನ್ನು ಮೂಲ ಪ್ರತಿಯೊಂದಿಗೆ ತಾಳೆ ನೋಡಿ ನಕಲನ್ನು ನಿ.ಆರ್.11 ಎಂದು ಗುರುತಿಸಲಾಯಿತು.

ಅರ್ಜಿದಾರರ ತಂದೆಯ ಹೆಸರಿನಲ್ಲಿರುವ 3 ಖಾತಾ ಎಕ್ಸ್‌ಟ್ರ್ಯಾಕ್ಟ್ ಗಳ ದೃಢೀಕೃತ ನಕಲನ್ನು ಹಾಜರುಪಡಿಸಿರುತ್ತೇನೆ, ಸದರಿ ದಾಖಲೆಯನ್ನು ನಿಆರ್ 12 ರಿಂದ 14 ಎಂದು ಗುರುತಿಸಲಾಯಿತು.

ಅರ್ಜಿದಾರರ ತಂದೆಯ ಹಸರಿನಲ್ಲಿರುವ ಪಹಣಿ ಹಾಜರುಪಡಿಸಿರುತ್ತೇನೆ, ಸದರಿ ದಾಖಲೆಯನ್ನು ನಿಆರ್-15 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ-</u> ಅರ್ಜಿದಾರರ ಪರ ಶ್ರೀ ಸಿ ಬಿ ವಕೀಲರಿಂದಃ

ನನಗೆ ಅರ್ಜಿದಾರರು 25 ಗ್ರಾಂ ತೂಕದ ಚಿನ್ನದ ಬ್ರಾಸ್ ಲೈಟ್ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಈ ಅರ್ಜಿ ಸಲ್ಲಿಸಿದ ನಂತರ ನಾವು ಖಾತೆ ಬದಲಾವಣೆ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಾನು ಕೇವಲ ಸ್ವಲ್ಪ ಆಸ್ತಿಗಳನ್ನು ನನ್ನ ಅಣ್ಣನ ಹೆಸರಿನಲ್ಲಿ ಮತ್ತು ಅಕ್ಕನ ಹೆಸರಿನಲ್ಲಿ ಇದೆ ಎಂದು ಹಾಜರುಪಡಿಸಿದ್ದು, ನನ್ನ ಹೆಸರಿನಲ್ಲಿರುವ ಪಹಣಿಗಳನ್ನು ಉದ್ದೇಶಪೂರ್ವಕವಾಗಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ಬಾಣಾವಾರದ ಪಟ್ಟಣದ ರಸ್ತೆಯ ಪಕ್ಕದಲ್ಲಿರುವ ಬೀರಲಿಂಗೇಶ್ವರ ಪ್ರಾವಿಜನ್ ಸ್ಟೋರ್ ನನಗೆ ಸೇರಿದ್ದು ಎಂದರೆ ಸರಿಯಲ್ಲ. ನನಗೆ ಸದರಿ ಅಂಗಡಿಯಿಂದ ದಿನಕ್ಕೆ 20 ಸಾವಿರಕ್ಕಿಂತ ಹೆಚ್ಚು ಆದಾಯವಿದೆ ಎಂದರೆ ಸರಿಯಲ್ಲ. ಬಾಣಾವಾರದಲ್ಲಿ ನನ್ನದು

ಒಂದು ಪ್ರತಿಷ್ಠಿತ ಕುಟುಂಬವಾಗಿದ್ದರಿಂದ ಅರ್ಜಿದಾರರ ತಂದೆ-ತಾಯಿಯವರು ನನ್ನ ಆದಾಯವನ್ನು ಮತ್ತು ಕುಟುಂಬದ ಸ್ಥಿತಿಗತಿ ನೋಡಿ ಮದುವೆ ಮಾಡಿಕೊಟ್ಟಿದ್ದರು ಆ ಕಾರಣ ನನಗೆ ವಾರ್ಷಿಕ 40 ಲಕ್ಷದಷ್ಟು ಆದಾಯವಿದೆ ಎಂದರೆ ಸರಿಯಲ್ಲ. ನನ್ನ ಬಳಿ ಯಾವುದೇ ಕಾರು ಇರುವುದಿಲ್ಲ. ಅರ್ಜಿದಾರರ ತಂದೆ ಅರ್ಜಿದಾರರ ಮದುವೆಗೆಂದು ಅವರ ಆಸ್ತಿಗಳನ್ನು ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನನಗೆ ಈ ವಿಚಾರ ಗೊತ್ತಿದ್ದರು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮದುವೆಯ ಕಾಲದಲ್ಲಿ ಅರ್ಜಿದಾರಳು ಆರೋಗ್ಯವಂತರಾಗಿದ್ದವರು ಈಗ ನಮ್ಮ ಕುಟುಂಬದವರು ಮತ್ತು ನಾನು ನೀಡಿದ ಕಿರುಕುಳದಿಂದ ಈಗ ಅನಾರೋಗ್ಯದಿಂದ ಬಳಲುತ್ತಿದ್ದಾರೆ ಎಂದರೆ ಸರಿಯಲ್ಲ. ಅರ್ಜಿದಾರಳು ಕಡೂರಿನಲ್ಲಿ ಬೇರೆ ಬಾಡಿಗೆ ಮನೆಯಲ್ಲಿ ವಾಸಮಾಡಿಕೊಂಡು ಕೂಲಿ ಕೆಲಸ ಮಾಡಿಕೊಂಡು ಜೀವನ ನಡೆಸುವ ಪರಿಸ್ಥಿತಿಗೆ ನಾನು ತಂದಿರುತ್ತೇನೆ ಎಂದರೆ ಸರಿಯಲ್ಲ. ಅರ್ಜಿದಾರಳ ತಂದೆ ಮಗಳ ಜೀವನದ ಚಿಂತೆಯಲ್ಲಿಯೇ ಮೃತಪಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ಮುಂದುವರೆದ ಪಾಟೀ ಸವಾಲು ಮಾಡಲು ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,

sd/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು ಕಡೂರು.